International Journal of Kannada Research 2017; 3(2): 87-91




International Journal of Kannada Research
www.kannadajournal.com

ISSN: 2454–5813
IJSR 2017; 3(2): 87-91
© 2017 IJKS
www.kannadajournal.com
Received: 18-02-2017
Accepted: 19-03-2017

**ಎಚ್. ಎಂ. ಮಹೇಶ್**
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು ಚಿಕ್ಕಮಗಳೂರು–577102

**Correspondence**
**ಎಚ್. ಎಂ. ಮಹೇಶ್**
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು ಚಿಕ್ಕಮಗಳೂರು–577102

# ಅಂಕಣ ಸಾಹಿತ್ಯ ಮತ್ತು ಚಂದ್ರಯ್ಯನಾಯ್ಡು ವ್ಯಕ್ತಿಚಿತ್ರಗಳು

**ಎಚ್. ಎಂ. ಮಹೇಶ್**

ಆಧುನಿಕ ಕಾಲಘಟ್ಟದಲ್ಲಿ ಕನ್ನಡದಲ್ಲಿ ವೈವಿಧ್ಯಮಯ ಸಾಹಿತ್ಯ ರೂಪಗಳು ಸೃಷ್ಟಿಯಾಗುತ್ತಿವೆ. ಹೊಸ ಹೊಸ ಪ್ರಕಾರಗಳು ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಯಾಗುತ್ತಿವೆ. ಹೊಸಗನ್ನಡ ಸಾಹಿತ್ಯ ಪ್ರಕಾರಗಳಾದ ಕವಿತೆ, ಕಥೆ, ಕಾದಂಬರಿ, ನಾಟಕ,ಪ್ರಬಂಧ, ಜೀವನ ಚರಿತ್ರೆ ಮೊದಲಾದ ಪ್ರಕಾರಗಳಿಗೆ ಸೇರ್ಪಡೆಯಾದ ಮತ್ತೊಂದು ಹೊಸ ಪ್ರಕಾರ ಅಂಕಣ ಸಾಹಿತ್ಯ. ಇದು ವಿಶಿಷ್ಟ ಬಗೆಯ ಪತ್ರಿಕಾ ಸಾಹಿತ್ಯವಾಗಿ ಓದುಗರ ಗಮನ ಸೆಳೆದಿದೆ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಗಳಿಗೆ ಅಂಕಣ ಬರಹವೆಂದು ಕರೆಯುತ್ತಾರೆ. ಕನ್ನಡದಲ್ಲಿ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದ್ದು, ಇಂಗ್ಲಿಷ್‌ನ 'ಕಾಲಂ' ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ 'ಅಂಕಣ' ಎಂಬ ಪದ ಬಳಕೆಯಾಗುತ್ತಿದೆ. ವಿಶಿಷ್ಟ ಬಗೆಯ ಗದ್ಯ ಬರಹವಾಗಿರುವ ಅಂಕಣ ಸಾಹಿತ್ಯ ಇತ್ತ ವರದಿಯೂ ಅಲ್ಲದ, ಅತ್ತ ಪೂರ್ಣವಾಗಿ ಸಾಹಿತ್ಯವೂ ಅಲ್ಲದ, ಆದರೆ ಸಮಕಾಲೀನ ಆಗು–ಹೋಗುಗಳನ್ನು ಹಿಡಿದಿಡುವ ಸೃಜನಶೀಲ ಸೆಲೆಯುಳ್ಳ ಬರಹವಾಗಿದೆ.

ಅಂಕಣ ಬರಹಗಳು ಯಾವುದೇ ನಿರ್ದಿಷ್ಟ ಸಾಹಿತ್ಯ ಪ್ರಕಾರವಲ್ಲ. ಅದು ಪತ್ರಿಕೆಗಾಗಿ ಹುಟ್ಟಿದ ಸಾಹಿತ್ಯ. ಅಂಕಣಕಾರನಿಗೆ ವಸ್ತು ವಿಷಯದ ಪರಿಮಿತಿಯಿಲ್ಲ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯುಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ ಅಂಕಣಕಾರ. ಅಂಕಣ ಬರಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪನವನ್ನು ನೀಡಬೇಕಾಗುತ್ತದೆ. ಇದು ಅಂಕಣ ಬರಹದ ಪ್ರಮುಖ ಲಕ್ಷಣವಾಗಿದೆ. "ಪ್ರಪಂಚದ ಆಗುಹೋಗುಗಳ ಸುತ್ತಲಿನ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು, ರಾಜಕೀಯ ಆರ್ಥಿಕ ವಿದ್ಯಮಾನಗಳು, ಪುರಾಣ ಇತಿಹಾಸದ ಘಟನಾವಳಿಗಳು, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರ ಬಗೆಗೆ, ಮಹಾತ್ಮರ ಬಗೆಗೆ ಅಂಕಣ ಸಾಹಿತ್ಯ ರೂಪುಗೊಳ್ಳುತ್ತದೆ. "[1] ಇತರ ಸಾಹಿತಿಗಳಿಗೆ ಹೋಲಿಸಿದರೆ ಅಂಕಣಕಾರನಿಗೆ ತನ್ನ ವಾಚಕ ವರ್ಗದ ಸ್ವರೂಪ, ಅಗತ್ಯ ಮತ್ತು ಅಭಿರುಚಿಗಳನ್ನು ಕುರಿತು ಖಚಿತವಾದ ತಿಳಿವಳಿಕೆಯಿರುತ್ತದೆ. ಮಾಹಿತಿ, ಮನರಂಜನೆ, ಸಂಸ್ಕೃತಿ ಪ್ರಚಾರಗಳನ್ನು ತಮ್ಮ ಮೂಲ ನೆಲೆಗಳಾಗಿ ಹೊಂದಿರುವ ನಿಯತ ಕಾಲಿಕೆಗಳ ಒಟ್ಟು ಸಂದರ್ಭದಲ್ಲಿ ಅಂಕಣ ಬರಹಕ್ಕೆ ತನ್ನದೇ ಆದ ಆಯಾಮಗಳು, ತುರ್ತುಗಳು ಮತ್ತು ಮಿತಿಗಳು ಪ್ರಾಪ್ತವಾಗುತ್ತವೆ. "ಪುಸ್ತಕವೊಂದರಲ್ಲಿ ಪ್ರಕಟವಾಗುವ ಲೇಖನವು ವ್ಯವಧಾನವನ್ನು ತಾನು ಬಯಸುತ್ತದೆ. ಓದುಗನ ಕಾಲಕ್ಕಾಗಿ ಪೈಪೋಟಿ ನಡೆಸುವ, ಅವನನ್ನು ಒಲಿಸಿ ಓದಿಸಿಕೊಳ್ಳುವ ಧರ್ಮ ಅದಕ್ಕೆ ಇರುವುದಿಲ್ಲ. ಆದರೆ ವೃತ್ತಪತ್ರಿಕೆ, ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಬರಹಗಳ ಪಾಡು ಹಾಗಲ್ಲ. ಈ ಭಾನುವಾರ ಈ ವಾರ ಅದನ್ನು ಓದದಿದ್ದರೆ ಸೋಮವಾರ ಮುಂದಿನವಾರ ಅದನ್ನು ಓದುವ ಸಂಭವ ಬಹಳ ಕಡಿಮೆ. ಹಾಗೆಂದು ಈ ಬರಹವು ಇಂದೇ ಓದಿ ಮುಗಿಸಿ, ನಾಳೆಯೇ ರದ್ದಿಯೆಂದು ಮಾರಿ ಬಿಡಬಹುದಾದಷ್ಟು ತಾತ್ಕಾಲಿಕವೂ ಆಗಬಾರದು. "[2] ಏಕಕಾಲದಲ್ಲಿ ಸಮಕಾಲಿಕವೂ, ಸಾರ್ವಕಾಲಿಕವೂ ಆಗಬೇಕಾದ ಹೊಣೆಯು ಇಂಥ ಅಂಕಣಕಾರನಿಗೆ ಇರುತ್ತದೆ. ಅಂಕಣಕಾರ ತನ್ನ ಬರವಣಿಗೆಯ ಮೂಲಕ ಓದುಗರಿಗೆ ಅಪೂರ್ವ ಮಾಹಿತಿಯನ್ನೊದಗಿಸಿ ಕೊಡುವ, ಅವರನ್ನು ಚಿಂತನೆಗೆ ಹಚ್ಚುವ, ಅವರ ಮನಸ್ಸನ್ನು ಅರಳಿಸುವ ಕೆಲಸವನ್ನು ಮಾಡುತ್ತಿರುತ್ತಾನೆ. ಅಂಕಣ ಬರಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನು ಆಕರ್ಷಿಸುವ ಗುಣವನ್ನು ಪಡೆದುಕೊಂಡಿರುವುದೇ ಆಗಿದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನು ಅಂಕಣ ಬರಹ ಮಾಡುತ್ತಿದೆ.

ಅಂಕಣ ಸಾಹಿತ್ಯವೆಂಬುದು ಪತ್ರಿಕೆಯಷ್ಟೇ ಪ್ರಾಚೀನವಾದುದು. ಇಂಗ್ಲಿಷ್‌ನಲ್ಲಿ ಅಂಕಣ ಸಾಹಿತ್ಯಕ್ಕೆ ಒಂದು ದೀರ್ಘ ಪರಂಪರೆಯೇ ಇದೆ. "ಬೆಂಜಮಿನ್ ಫ್ರಾಂಕ್ಲಿನ್‌ನ ಸಹೋದರನಾದ ಜೇಮ್ಸ್, ಜಾನ್ ಡಿಕಿನ್‌ಸನ್ಸ್, ಅಲೆಕ್ಸಾಂಡರ್ ಹ್ಯಾಮಿಲ್ಟನ್, ಜೇಮ್ಸ್ ಮ್ಯಾಡಿಸನ್, ಜಾನ್ ಡೇ ಮೊದಲಾದವರು ಅಂಕಣ ಸಾಹಿತ್ಯದಲ್ಲಿ ಆದ್ಯ ಬರಹಗಾರರಾಗಿದ್ದರು. "[3] ಪತ್ರಿಕೆ ಮತ್ತು ನಿಯತಕಾಲಿಕೆಗಳ ಓದುಗರು ಸಂಪಾದಕೀಯದ ಜೊತೆಗೆ ಅಂಕಣ ಬರಹಗಳನ್ನೂ ಆಸಕ್ತಿಯಿಂದ ಓದುತ್ತಿದ್ದರು. ಹೀಗೆ ಬೆಳೆದ ಅಂಕಣ ಬರಹ ಪತ್ರಿಕೋದ್ಯಮದಲ್ಲಿ ಶಾಶ್ವತವಾಗಿ ನೆಲೆಯೂರಿತು. ಕನ್ನಡದಲ್ಲಿ ಅಂಕಣ ಬರಹ ಆರಂಭವಾದದ್ದು 20ನೆಯ ಶತಮಾನದಲ್ಲಿ. 1843ರ 'ಮಂಗಳೂರು ಸಮಾಚಾರ' ಕನ್ನಡ ಪತ್ರಿಕೋದ್ಯಮದ ಮೈಲಿಗಲ್ಲು. ಕನ್ನಡದ ಸಾಹಿತಿ, ಪತ್ರಿಕೋದ್ಯಮಿಗಳಾದ ಡಿವಿಜಿ, ಮಾಸ್ತಿ ಅವರ ಸಂಪಾದಕೀಯ ಬರಹಗಳು ಕನ್ನಡ ಅಂಕಣ ಸಾಹಿತ್ಯದ ತೋರು ದೀವಿಗೆಗಳಾದವು. ಕನ್ನಡ ಪತ್ರಿಕೋದ್ಯಮ ಬೆಳೆಯುತ್ತಾ ಬಂದಂತೆ ಅದರ ವ್ಯಾಪ್ತಿಯೂ ವಿಸ್ತಾರವಾಗ ತೊಡಗಿತು. ಸಂಪಾದಕೀಯ ಬರಹಗಳ ಜೊತೆಗೆ ಅಂಕಣಗಳೂ ಪ್ರತ್ಯೇಕವಾಗಿ ಕಾಣಿಸಿಕೊಳ್ಳಲು ಆರಂಭವಾದವು. ಸ್ವದೇಶಾಭಿಮಾನಿ, ಅಂತರಂಗ, ರಾಷ್ಟ್ರಬಂಧು, ಪ್ರಜಾಮತ, ಪ್ರಜಾವಾಣಿ, ಕನ್ನಡ ಪ್ರಭ, ಕರ್ಮವೀರ ಮುಂತಾದ ಪತ್ರಿಕೆಗಳು ಅಂಕಣ ಬರಹಗಳಿಗೆ ವೇದಿಕೆ ಕಲ್ಪಿಸಿದವು. ದೈನಿಕ ಹಾಗೂ ನಿಯತಕಾಲಿಕೆಗಳ ನಿಗದಿತ ಜಾಗದಲ್ಲಿ ನಿರ್ದಿಷ್ಟ ಶೀರ್ಷಿಕೆಗಳಡಿಯಲ್ಲಿ ನಿಯತವಾಗಿ ಪ್ರಕಟವಾಗುವ ಬಿಡಿ ಬರಹಗಳು ಸಾಹಿತ್ಯದ ಮಹತ್ವವನ್ನು ಪಡೆದಿವೆ. ಇಲ್ಲಿ ಮುಖ್ಯ ಶೀರ್ಷಿಕೆ ಒಂದೇ ಇದ್ದರೂ ವಿಷಯ ಮಾತ್ರ ಲೇಖನದಿಂದ ಲೇಖನಕ್ಕೆ ಬದಲಾಗುತ್ತಿರುತ್ತದೆ. ಅಂಕಣ ಸಾಹಿತ್ಯದಲ್ಲಿ ಕಡೆಂಗೋಡ್ಲು ಶಂಕಟಭಟ್ಟರು 'ರಾಷ್ಟ್ರಬಂಧು' ಪತ್ರಿಕೆಗೆ ಬರೆಯುತ್ತಿದ್ದ ಬರಹಗಳ ಸಂಗ್ರಹ 'ಕಡೆಂಗೋಡ್ಲು ಅಗ್ರ ಲೇಖನಗಳು' ಕೃತಿಗೆ ಐತಿಹಾಸಿಕ ಮಹತ್ವವಿದೆ. ಸ್ವಾತಂತ್ರ್ಯ ಪೂರ್ವದ ಮತ್ತು ಸ್ವಾತಂತ್ರ್ಯೋತ್ತರ ಸಂಗತಿಗಳನ್ನು ಕುರಿತಾದ ಲೇಖನಗಳು ಇವಾಗಿವೆ. ಸಿದ್ಧವನಳ್ಳಿ ಕೃಷ್ಣಶರ್ಮ, ನಿರಂಜನ, ವಿ.ಎಂ. ಇನಾಮ್‌ದಾರ್, ಹಾ ಮಾ ನಾಯಕ, ಕು.ಶಿ. ಹರಿದಾಸಭಟ್ಟ, ಕೀರ್ತಿನಾಥ ಕುರ್ತುಕೋಟಿ, ಪಾಟೀಲ ಪುಟ್ಟಪ್ಪ, ವೈಎನ್.ಕೆ. ಎಚ್ಚೆಸ್ಕೆ, ಬಿ. ವಿ. ವೈಕುಂಠರಾಜು, ಪಿ. ಲಂಕೇಶ್, ಜಿ. ವೆಂಕಟಸುಬ್ಬಯ್ಯ, ಸಿ.ವಿ. ರಾಜಗೋಪಾಲ, ಬಿ. ಎ. ವಿವೇಕ ರೈ, ಲಿಂಗದೇವರು ಹಳೆಮನೆ ಮೊದಲಾದ ಹಿರಿಯ ಬರಹಗಾರರು ತಮ್ಮ ಅಂಕಣ ಬರಹಗಳ ಮೂಲಕ ಈ ಪರಂಪರೆಯನ್ನು ಇನ್ನಷ್ಟು ಶಕ್ತಿಯುತವಾಗಿ ಬೆಳೆಸಿದರು. ಹೆಚ್ಚಿನ ಅಂಕಣ ಬರಹಗಳು ಸಮಕಾಲೀನ ರಾಜಕೀಯ ವಿದ್ಯಾಮಾನಗಳು, ಕಲೆ, ವಿಜ್ಞಾನ, ಸಂಗೀತ, ಶಿಕ್ಷಣ, ಕ್ರೀಡೆ, ವೈದ್ಯಕೀಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಬರಹಗಳಾಗಿವೆ. ಈಗೀಗ ಲಘು ಹರಟೆಗಳು ಅಂಕಣ ಬರಹಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ, ಕಲೆ ಕುರಿತ ಚಿಂತನೆಯಿರುತ್ತದೆ. "ಈ ಬಗೆಯ ಅಂಕಣಕಾರರಲ್ಲಿ ನಿರಂಜನರೇ ಆದ್ಯರು 'ಉಷಾ' ಪತ್ರಿಕೆಯಲ್ಲಿ ಬರೆದ ಸರೋಜ ಸಂಚಯ ಎಂಬ ಅಂಕಣ, 'ಚಿತ್ರಗುಪ್ತ' ಪತ್ರಿಕೆಯಲ್ಲಿ ಬರೆದ ಸಾಧನ ಸಂಚಯ ಎಂಬ ಅಂಕಣ, 'ಪ್ರಜಾವಾಣಿ' ಪತ್ರಿಕೆಯ ಬೇವು-ಬೆಲ್ಲ ಎಂಬ ಅಂಕಣ, 'ಕರ್ಮವೀರ' ಪತ್ರಿಕೆಯ ರಾಜ್ಯದ ರಾಜಧಾನಿಯಿಂದ ಹಾಗೂ ಅನಂತರದಲ್ಲಿ ನನ್ನ ದಿನಚರಿಯಿಂದ ಅಂಕಣಗಳು ಪ್ರಸಿದ್ಧವಾಗಿದ್ದವು. "[4]

ಕನ್ನಡದಲ್ಲಿ ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ಹೆಚ್ಚುಕಾಲ ಸಾಹಿತ್ಯಕ ಅಂಕಣ ಬರೆದವರಲ್ಲಿ ಹಾ.ಮಾ.ನಾಯಕ ಮತ್ತು ಎಚ್ಚೆಸ್ಕೆ ಅವರು ಪ್ರಮುಖರು. ಎಚ್ಚೆಸ್ಕೆ ಅವರ ಅಂಕಣ ಬರಹಗಳು ಸಾಹಿತ್ಯಕ್ಕಷ್ಟೇ ಸೀಮಿತವಲ್ಲ. ಆರ್ಥಿಕ ವಿಚಾರ, ವ್ಯಕ್ತಿ ವಿಷಯ, ರಾಜಕೀಯ ವಿಷಯಗಳೂ ಪ್ರಸ್ತಾಪಗೊಂಡಿವೆ. ದೇಶಬಂಧು, ಕನ್ನಡನುಡಿ, ಪ್ರಜಾವಾಣಿ, ಸುಧಾ ಮುಂತಾದ ಪತ್ರಿಕೆಗಳಲ್ಲಿ ಐದಾರು ದಶಕಗಳ ಕಾಲ ಅಂಕಣ ಕೃಷಿ ಮಾಡಿದ್ದಾರೆ. ವಾರದಿಂದ ವಾರಕ್ಕೆ, ವಾರದ ವ್ಯಕ್ತಿ, ವ್ಯಕ್ತಿ ವಿಷಯ, ದುರ್ಬೀನು, ತರಂಗ, ಆರ್ಥಿಕ ನೋಟ ಮುಂತಾದವು ಇವರ ಅಂಕಣ ಶೀರ್ಷಿಕೆಗಳಾಗಿವೆ. ಅಂಕಣ ಸಾಹಿತ್ಯ ಕ್ಷೇತ್ರದಲ್ಲಿ ಐದು ದಶಕಗಳ ಕಾಲ ಗಮನಾರ್ಹ ಸಾಧನೆಗೈದವರು ಹಾ.ಮಾ.ನಾಯಕರು. ಇವರು 1951 ರಲ್ಲಿ 'ನಂದಿನಿ' ಪತ್ರಿಕೆಗೆ ಪೂರ್ಣಿಮೆಗೆ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಅಂಕಣ ಬರಹ ಆರಂಭಿಸಿದರು. ಅನಂತರ ನಾ ಕಂಡ ಸಾಹಿತಿಗಳು ಅಂಕಣ ಬರೆದರು. 1967 ರಿಂದ ಸಾಹಿತ್ಯ ಸಲ್ಲಾಪ ಎಂಬ ಅಂಕಣ ಬರೆಯಲಾರಂಭಿಸಿದರು. ಅನಂತರ 'ಪ್ರಜಾಮತ'ದಲ್ಲಿ ಹಾಮಾನಾ ಬರೆಯುತ್ತಾರೆ, 'ಪ್ರಜಾವಾಣಿ'ಯಲ್ಲಿ ಸಂಪ್ರತಿ, 'ತರಂಗ'ದಲ್ಲಿ ಸ್ವಗತ, 'ಕರ್ಮವೀರ'ದಲ್ಲಿ ಪುಸ್ತಕ ಪ್ರಸ್ತಾಪ, 'ಸುಧಾ' ಪತ್ರಿಕೆಯಲ್ಲಿ ಸಂಪ್ರತಿ ಹೀಗೆ ಬೇರೆ-ಬೇರೆ ಪತ್ರಿಕೆಗಳಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಹಾಮಾನಾ ಅಂಕಣ ಬರಹಗಳನ್ನು ತುಂಬಿದರು.

ನಿರಂಜನರು ಆರಂಭಿಸಿದ ಸಾಹಿತ್ಯಕ ಅಂಕಣ ಬರಹಗಳಿಗೆ ಸಾರ್ವಕಾಲೀಕತೆಯ ರೂಪಕೊಟ್ಟು ಅಂಕಣ ಬರಹವನ್ನು ಕೀರ್ತಿ ಶಿಖರಕ್ಕೆ ಏರಿಸಿದವರು ಹಾಮಾನಾ.ಇವರು ಅಂಕಣ ಬರಹಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಕಲ್ಪಿಸಿಕೊಟ್ಟರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಅಂಕಣಕಾರರೆಂಬ ಖ್ಯಾತಿಗೆ ಪಾತ್ರರಾದರು. ಕು. ಶಿ. ಹರಿದಾಸಭಟ್ಟರು ಬರೆಯುತ್ತಿದ್ದ 'ಲೋಕಾಭಿರಾಮ', ಕೀರ್ತಿನಾಥ ಕುರ್ತುಕೋಟಿ ಪ್ರಜಾವಾಣಿ ಪತ್ರಿಕೆಗೆ ಬರೆಯುತ್ತಿದ್ದ 'ಸಮ್ಮುಖ', ವೈ.ಎನ್.ಕೆ. ಅವರು ಕನ್ನಡ ಪ್ರಭ ಪತ್ರಿಕೆಯಲ್ಲಿ 'ವಂಡರ್ ಕಣ್ಣು', ಪಾಟೀಲ ಪುಟ್ಟಪ್ಪನವರ 'ಪಾಪು ಪ್ರಪಂಚ', ಸಂತೋಷ ಕುಮಾರ ಗುಲ್ವಾಡಿ ಅವರ 'ಅಂತರಂಗ ಬಹಿರಂಗ', ಬಿ.ವಿ. ವೈಕುಂಠ ರಾಜು ಅವರ 'ಸಂಪಾದಕರ ಡೈರಿ', ಈಶ್ವರ ದೈತೋಟ ಅವರ 'ಅಂತರ ದೃಷ್ಟಿ'. ಪಿ.ಲಂಕೇಶ್ ಅವರ 'ಟೀಕೆ ಟಿಪ್ಪಣಿ', ರವಿ ಬೆಳಗೆರೆ ಅವರ 'ಖಾಸ್ ಬಾತ್', ಸಿದ್ದಲಿಂಗ ಪಟ್ಟಣ ಶೆಟ್ಟಿ ಅವರ 'ಚಹಾದ ಜೋಡಿ ಚೂಡದಾಂಗ', ವೀರಣ್ಣ ದಂಡೆ ಅವರ 'ಕಲ್ಬುರ್ಗಿ ಕಲರವ', ದಿನೇಶ್ ಅಮ್ಮಿನ ಮಟ್ಟು ಅವರ 'ಅನಾವರಣ', ಪದ್ಮರಾಜ ದಂಡಾವತಿ ಅವರ 'ನಾಲ್ಕನೇ ಆಯಾಮ', ರಘುನಾಥ ಚ.ಹ ಅವರ 'ವ್ಯಕ್ತಿ' ಹೀಗೆ ನೂರಾರು ಸಂಖ್ಯೆಯ ಅಂಕಣಕಾರರು ಪ್ರಾದೇಶಿಕ ಮಟ್ಟದ,ರಾಜ್ಯಮಟ್ಟದ ಪತ್ರಿಕೆಗಳಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಅಂಕಣ ಸಾಹಿತ್ಯ ರಚಿಸಿರುತ್ತಾರೆ. ಇಂದು ಕನ್ನಡ ಅಂಕಣ ಸಾಹಿತ್ಯ ವೈವಿಧ್ಯ ಪೂರ್ಣವಾಗಿ ಬೆಳೆದಿದೆ, ಬೆಳೆಯುತ್ತಿದೆ. ಬಹುತೇಕ ಪತ್ರಿಕೆಗಳು ನಿತ್ಯ ಅಂಕಣಗಳನ್ನು ಪ್ರಕಟಿಸುತ್ತಿದೆ. ಇದು ಅಂಕಣ ಬರಹದ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಅಂಕಣ ಸಾಹಿತ್ಯ ರಚನೆಯಲ್ಲಿ ಪತ್ರಿಕೆಗಳ ಪಾತ್ರ ದೊಡ್ಡದು. ಪ್ರಸ್ತುತ ಕನ್ನಡ ಪತ್ರಿಕೋದ್ಯಮದಲ್ಲಿ ಅಂಕಣ ಬರಹ ಇಲ್ಲದ ಒಂದು ಪತ್ರಿಕೆಯೂ ಇಲ್ಲ ಎನ್ನಬಹುದು. ದಿನಪತ್ರಿಕೆಗಳು, ನಿಯತಕಾಲಿಕೆಗಳು, ವಿಶೇಷ ಸಂಚಿಕೆಗಳು ಅಂಕಣ ಸಾಹಿತ್ಯಕ್ಕೆ ಸ್ಥಾನ ಮೀಸಲಿರಿಸಿ ಬರವಣಿಗೆಗೆ ಪ್ರೋತ್ಸಾಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಇತ್ತೀಚಿನ ವರ್ಷಗಳಲ್ಲಿ ಅಂಕಣ ಸಾಹಿತ್ಯ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿದೆ. ಈ ಸಾಹಿತ್ಯ ಪುಸ್ತಕ ರೂಪವನ್ನು ಪಡೆಯುವವರೆಗೆ ಪತ್ರಿಕಾ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಅವುಗಳ ಸಾಹಿತ್ಯಿಕ ಮೌಲ್ಯದ ಬಗೆಗೂ ಯಾರೂ ತಲೆಕೆಡಿಸಿಕೊಂಡಿರಲಿಲ್ಲ. ಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತಿದ್ದ ಸಮಕಾಲೀನ ಸಂದರ್ಭಗಳಿಗಷ್ಟೇ ಅಂಕಣ ಬರಹಗಳು ಪ್ರಸ್ತುತವಾಗಿದ್ದವು. ಅದರಿಂದಾಚೆಗಿನ ಸಾಹಿತ್ಯಿಕ ಮೌಲ್ಯ

ಅವುಗಳಿಗಿಲ್ಲ ಎಂಬ ಭಾವನೆ ಸಾಮಾನ್ಯವಾಗಿತ್ತು. ಆದರೆ ಅಂತಹ ಬರಹಗಳು ಇಂದು ಪುಸ್ತಕ ರೂಪದಲ್ಲಿ ಸಂಕಲನಗೊಂಡು ಹೊರ ಬರ ತೊಡಗಿದಾಗಲೇ ಅವುಗಳ ನಿಜವಾದ ಸಾಹಿತ್ಯಕ ಮೌಲ್ಯ ಅರಿವಾಗತೊಡಗಿದುದು. "ಬಹುಶಃ 80ರ ದಶಕದವರೆಗೆ ಅಲ್ಲೊಂದು ಇಲ್ಲೊಂದರಂತೆ ಪ್ರಕಟವಾಗುತ್ತಿದ್ದ ಅಂಕಣ ಬರಹಗಳ ಸಂಕಲನಗಳು 90ರ ದಶಕದ ವೇಳೆಗೆ ವಿಪುಲವಾಗಿ ಬರತೊಡಗಿದವು. ಜೊತೆಗೆ ಬರಹಗಳ ವಿಷಯ, ಅವುಗಳ ನಿರ್ವಹಣೆ, ನಿರೂಪಣೆಯ ದಾಟಿ, ಭಾಷೆ, ನುಡಿಗಟ್ಟು ಇವುಗಳಲ್ಲೂ ವೈವಿಧ್ಯತೆ ಕಾಣಿಸಿಕೊಂಡಿತು. ಹಾ.ಮಾ.ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದದ್ದಂತೂ ಅಂಕಣ ಸಾಹಿತ್ಯಕ್ಕೆ ಸಂದ ಮಹೋನ್ನತ ಗೌರವವೆನಿಸಿತು. "[5] ಹೀಗೆ ತೊಂಬತ್ತರ ದಶಕವು ಅಂಕಣ ಬರಹಗಳ ಮಟ್ಟಿಗೆ ಸುಗ್ಗಿಯ ಕಾಲವೆಂದು ಹೇಳಬಹುದು.

**ವ್ಯಕ್ತಿಚಿತ್ರಗಳು**

ಅಂಕಣ ಸಾಹಿತ್ಯದ ಭಾಗವಾಗಿ 'ವ್ಯಕ್ತಿಚಿತ್ರಗಳು' ರೂಪುಗೊಂಡಿವೆ. ವ್ಯಕ್ತಿಚಿತ್ರಗಳನ್ನು ಸಂಕ್ಷಿಪ್ತ ಜೀವನ ಚರಿತ್ರೆ ಎನ್ನಬಹುದು. ನೂರಾರು ಪುಟಗಳಲ್ಲಿ ಹೇಳಬಹುದಾದ ಸಂಗತಿಗಳನ್ನು ಎರಡು–ಮೂರು ಪುಟಗಳಲ್ಲಿ ಅಡಕಗೊಳಿಸುವುದು ಇದರ ಗುಣ. ಇದು ಕರಿಯನ್ನು ಕನ್ನಡಿಯಲ್ಲಿ ತೋರಿಸಿವ ಪ್ರಯತ್ನವಾಗಿದೆ. 'ಸುಧಾ' ವಾರ ಪತ್ರಿಕೆಯಲ್ಲಿ ಎಚ್ಚೆಸ್ಕೆ ಅವರು ಬರೆಯುತ್ತಿದ್ದ ವ್ಯಕ್ತಿ ವಿಷಯ ತುಂಬಾ ಪ್ರಸಿದ್ಧವಾದುದು. ಚಿಕ್ಕ ಚೊಕ್ಕ ವಾಕ್ಯಗಳು ಇವರ ಅಂಕಣದಲ್ಲಿ ಎದ್ದು ಕಾಣುವ ವಿಶೇಷ ಗುಣ. ವ್ಯಕ್ತಿ ವಿಷಯದ ಚಿಕ್ಕ ಅಂಕಣದಲ್ಲಿ ಅವರು ವ್ಯಕ್ತಿಯ ಇಡೀ ವ್ಯಕ್ತಿತ್ವವನ್ನೇ ಹಿಡಿದಿಡುವ ಪರಿ ನಿಜಕ್ಕೂ ಅನನ್ಯವಾದುದು. ಇವರಿಂದ ಸ್ಫೂರ್ತಿ ಪಡೆದು ವ್ಯಕ್ತಿ ಚಿತ್ರಗಳ ರಚನೆಗೆ ತೊಡಗಿದವರಲ್ಲಿ ಚಂದ್ರಯ್ಯನಾಯ್ಡು ಕೂಡ ಒಬ್ಬರಾಗಿದ್ದಾರೆ.

ಅಂಕಣ ಸಾಹಿತ್ಯದ ಒಂದು ಭಾಗವಾಗಿರುವ ವ್ಯಕ್ತಿ ಚಿತ್ರಗಳು ತನ್ನ ಸಂಪರ್ಕಕ್ಕೆ ಬಂದ ವ್ಯಕ್ತಿಗಳ ವ್ಯಕ್ತಿತ್ವವನ್ನು ಆತ್ಮೀಯವಾಗಿ ಕಟ್ಟಿಕೊಡುತ್ತದೆ. "ವ್ಯಕ್ತಿ ಚಿತ್ರಣ ಜೀವನ ಚರಿತ್ರೆಯ ಒಂದು ಒಳ ಪ್ರಕಾರ, ಕೃತಿಯ ನಾಯಕನ ಇಡೀ ಜೀವನವನ್ನು ಸಮೀಕ್ಷಿಸದೆ, ಅವನ ವ್ಯಕ್ತಿತ್ವದ ಸೊಗಸನ್ನೊ ಸತ್ವವನ್ನೊ (ಎರಡನ್ನೂ ಆಗಬಹುದು) ಸ್ಪಷ್ಟಗೊಳಿಸುವುದು ಇದರ ಉದ್ದೇಶ. "[6] "ವ್ಯಕ್ತಿ ಚಿತ್ರಗಳೂ ಒಂದು ಮಾದರಿಯ ಪ್ರಬಂಧಗಳೆ. ಆದರೆ ಇವು ವೈಚಾರಿಕ/ವಿಮರ್ಶಾತ್ಮಕ ಪ್ರಬಂಧಗಳಷ್ಟು ಗಂಭೀರವಾಗಿಯಾಗಲೀ ಅಥವಾ ಲಲಿತ ಪ್ರಬಂಧಗಳಂತೆ ಅನೌಪಚಾರಿಕ ಶೈಲಿಯಲ್ಲಾಗಲೀ ಇರದೆ ಸಾಮಾನ್ಯವಾಗಿ ಇವೆರಡಕ್ಕೂ ಮಧ್ಯಮವೆನ್ನಬಹುದಾದ ಶೈಲಿಯಲ್ಲಿ ಮೂಡಿಬರುತ್ತವೆ. ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಕೊಡುವುದು ಮುಖ್ಯವಾಗಿರುವುದರ ಜೊತೆಗೆ ಆ ವ್ಯಕ್ತಿಯ ಸ್ವಭಾವವನ್ನು ಚಿತ್ರಿಸುವುದೂ ಅಷ್ಟೇ ಮುಖ್ಯವಾಗಿರುತ್ತದೆ. ಈ ವ್ಯಕ್ತಿಗಳು ಸಾರ್ವಜನಿಕ/ಸಾಂಸ್ಕೃತಿಕ ಬದುಕುಗೆ ಸಂಬಂಧಿಸಿದವರಾಗಿದ್ದರೆ ಅವರ ಕುರಿತಾದ ವ್ಯಕ್ತಿ ಚಿತ್ರಗಳು ಸಮಕಾಲೀನ ಚರಿತ್ರೆ ರೂಪಿಸಲು ನೆರವಾಗುತ್ತವೆ. "[7] ಬಹುತೇಕ ವ್ಯಕ್ತಿಚಿತ್ರಗಳು ಕಿರಿದುದರಲ್ಲಿ ಪಿರಿದರ್ಥವನ್ನು ಕಟ್ಟಿಕೊಡುವ ಉದ್ದೇಶವುಳ್ಳವುಗಳಾಗಿವೆ. 'ಹಿಡಿದರೆ ಹಿಡಿ ತುಂಬ, ಬಿಟ್ಟರೆ ಮನೆ ತುಂಬ' ಎಂಬ ಒಗಟಿನ ಅರ್ಥಕ್ಕೆ ಸಾದೃಶ್ಯದಂತಿರುವ ಲಿಪಿರೂಪಗಳಾಗಿವೆ. ತಾವು ಕಂಡು ಕೇಳಿದ, ಹತ್ತಿರದಿಂದ ಬಲ್ಲ ವ್ಯಕ್ತಿಗಳ ಬಗೆಗೆ ಅಂಕಣಕಾರರು ಹೊಂದಿರುವ ಗೌರವ, ಮೆಚ್ಚುಗೆ ಹಾಗೂ ಭಾವನಾತ್ಮಕ ಸಂಬಂಧಗಳನ್ನು ಆಪ್ತ ದಾಟಿಯಲ್ಲಿ ಹೇಳಿರುವುದನ್ನು ಕಾಣಬಹುದು. ಹಾಗೆಂದು ಆಯಾ ವ್ಯಕ್ತಿತ್ವದ ಓರೆ ಕೋರೆಗಳನ್ನು ಗುರುತಿಸಿಲ್ಲವೆಂದಲ್ಲ. ಆದರೆ ಅಂಥ ಸಂದರ್ಭಗಳು ವಿರಳ. ವ್ಯಕ್ತಿ ಚಿತ್ರಗಳು ಒಂದು ರೀತಿಯಲ್ಲಿ ಆನೆಯನ್ನು ಕನ್ನಡಿಯಲ್ಲಿ ತೋರಿಸಿದಂತೆ. "ಕರಿಯನ್ನು ಕನ್ನಡಿಯಲ್ಲಿ ಅಡಗಿಸುವ ಪ್ರಯತ್ನ ಮುಖ್ಯವಾದಂತೆಯೇ ಅದನ್ನು ಕಲಾತ್ಮಕವಾಗಿ ಸಂಯೋಜಿಸುವ ಜಾಣ್ಮೆ ವ್ಯಕ್ತಿ ಚಿತ್ರಕಾರನಿಗೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಕರಿಯನ್ನು ಕನ್ನಡಿಯಲ್ಲಿ ಅಡಗಿಸುವ ವ್ಯರ್ಥ ಪ್ರಯತ್ನವೊಂದೇ ಮುಖ್ಯವಾಗಿ ಕಲೆ ಗೌಣವಾಗಿಬಿಡಬಹುದು" ಎಂದು ಪ್ರೊ.ಕೆ. ಓಂಕಾರಪ್ಪ ಅಭಿಪ್ರಾಯಪಟ್ಟಿದ್ದಾರೆ. [8]

ಅಂಕಣಕಾರ ಅತ್ಯಂತ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ, ಪ್ರಾಮಾಣಿಕತೆಯಿಂದ ಸತ್ಯ ಶೋಧಕನಾಗಿ ಆಕರಗಳನ್ನು ಸಂಗ್ರಹಿಸಬೇಕಾಗುತ್ತದೆ. ನಮ್ಮ ನಡುವೆ ಬದುಕಿರುವ ಮತ್ತು ಬದುಕಿಲ್ಲದ ವ್ಯಕ್ತಿಗಳನ್ನು ಕುರಿತು ಬರೆಯುವ ಪ್ರಕಾರ ಇದಾಗಿದೆ. ಡಾ. ಜಿ.ಎಸ್. ಅಮೂರ ಅವರು ಹೇಳುವಂತೆ "ಪ್ರಚಲಿತ ವ್ಯಕ್ತಿ ವಿಷಯಗಳ ಬಗ್ಗೆ ಪರಿಶ್ರಮ ಮತ್ತು ಚಿಂತನೆಗಳಿಂದ ತಾನು ದೊರಕಿಸಿಕೊಂಡ ತಿಳಿವಳಿಕೆಯನ್ನು ಸಾಮಾನ್ಯ ಜನರೊಂದಿಗೆ ಹಂಚಿಕೊಂಡಾಗ ಅದಕ್ಕೆ ವಿಶೇಷ ಮಹತ್ವ ಬರುತ್ತದೆ. "[9] ಅಂಕಣದಲ್ಲಿ ಚಿತ್ರಿಸುವ ವ್ಯಕ್ತಿಯ ಬದುಕನ್ನು ಹತ್ತಿರದಿಂದ, ಮುಕ್ತ ಮನಸ್ಸಿನಿಂದ ಗ್ರಹಿಸಬೇಕಾಗುತ್ತದೆ. ವ್ಯಕ್ತಿಗಳ ಕಾಲ ದೇಶಗಳನ್ನು ಗಮನದಲ್ಲಿಟ್ಟುಕೊಂಡು ಬದುಕು ಮತ್ತು ಸಾಧನೆಯನ್ನು ಚಿತ್ರಿಸಬೇಕಾಗುತ್ತದೆ. ಅಭಿರುಚಿಯನ್ನು ನಿರ್ಮಾಣ ಮಾಡುತ್ತಲೇ, ಈಗಾಗಲೇ ಇರುವ ಅಭಿರುಚಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಎಲ್ಲ ಅಂಕಣಕಾರರ ದ್ವಂದ್ವ. ಅವನು ಬೀದಿಗೆ ಇಳಿಯಲಾರ. ದಂತಗೋಪುರದಲ್ಲಿ ಕುಳಿತಿರಲಾರ. ಯಾವುದೇ ಕ್ಷೇತ್ರದ ಬಗ್ಗೆ ಬರೆಯಲಿ ಅದನ್ನು ಸಾರ್ವಜನಿಕರಿಗಾಗಿ ಬರೆದರೆ ಆ ಕ್ಷೇತ್ರದಲ್ಲಿ ವೃತ್ತಿ ನಿರತರಾದವರಿಗೆ ಸಮಾಧಾನ ತರುವುದಿಲ್ಲ. ಹಾಗೆಂದು ಅವರನ್ನು ಮೆಚ್ಚಿಸ ಹೊರಟರೆ ಸಾರ್ವಜನಿಕರ ಗಂಟಲಲ್ಲಿ ಇಳಿಯುವುದಿಲ್ಲ. ಕರ್ನಾಟಕದ ಗ್ರಾಮೀಣ ಮೂಲೆಯಲ್ಲಿ ಓದುವ ಓದುಗನಿಂದ ಹಿಡಿದು ತಂತ್ರಜ್ಞರವರೆಗೆ ಎಲ್ಲರನ್ನೂ ಆಕರ್ಷಿಸುವುದು ಸುಲಭ ಸಾಧ್ಯವಲ್ಲ. ವಿಶೇಷವಾಗಿ 'ವ್ಯಕ್ತಿ ಚಿತ್ರ' ಪ್ರಕಾರದಲ್ಲಿ ಅಪಾರ ಸಂಖ್ಯೆಯ ಓದುಗರನ್ನು ತಲುಪಿರುವ ನಾಡಿನ ಹೆಸರಾಂತ ವಿದ್ವಾಂಸರುಗಳಾದ ಡಿ.ವಿ.ಜಿ. ವೀ. ಸೀತಾರಾಮಯ್ಯ, ಹಾಮಾನಾ. ಎಚ್ಚೆಸ್ಕೆ, ದೇಜಗೌ, ಸಿ.ಪಿ.ಕೆ. ಕು ಶಿ ಹರಿದಾಸಭಟ್ಟ ಮೊದಲಾದವರು ರಾಜ್ಯ ಮಟ್ಟದ ಪತ್ರಿಕೆಗಳಿಗಾಗಿ ಅಂಕಣಗಳನ್ನು ಬರೆದಿರುವುದನ್ನು ಕಾಣುತ್ತೇವೆ.

ಕನ್ನಡದಲ್ಲಿ ಪ್ರಾದೇಶಿಕ ಪತ್ರಿಕೆಗಳು ಅಪಾರ ಸಂಖ್ಯೆಯಲ್ಲಿವೆ. ಪ್ರತೀ ಜಿಲ್ಲೆಯಲ್ಲಿಯೂ ಜಿಲ್ಲಾ ಮಟ್ಟದ ಪತ್ರಿಕೆಗಳು, ವಿಭಾಗ ಮಟ್ಟದ ಪತ್ರಿಕೆಗಳೂ ಪ್ರಕಟವಾಗುತ್ತಿವೆ. ಅವುಗಳಲ್ಲೂ ಅಂಕಣಗಳು ಇದ್ದೇ ಇರುತ್ತವೆ. ಇಂತಹ ಪತ್ರಿಕೆಗಳ ಪ್ರಸರಣ ವ್ಯಾಪ್ತಿ ಸೀಮಿತವಾಗಿರುವುದರಿಂದ ಅವುಗಳಲ್ಲಿ ಪ್ರಕಟವಾಗುವ ಅಂಕಣ ಬರಹಗಳು ಅನೇಕ ಸಂದರ್ಭಗಳಲ್ಲಿ ಸ್ಥಳೀಯ ವಿಷಯಗಳಿಗೆ ಸಂಬಂಧಪಟ್ಟಿರುವುದುಂಟು. ಹಾಗೆಂದ ಮಾತ್ರಕ್ಕೆ ಅವುಗಳಿಗೆ ಮಹತ್ವವಿಲ್ಲ ಎಂದು ತಿಳಿಯಲಾಗದು. ಕೆಲವು ಪ್ರಾದೇಶಿಕ ಪತ್ರಿಕೆಗಳಲ್ಲೂ ಮೌಲಿಕ ಬರಹಗಳು ಪ್ರಕಟವಾಗಿವೆ ಮತ್ತು ಪ್ರಕಟವಾಗುತ್ತಿವೆ.

**ಚಂದ್ರಯ್ಯನಾಯ್ಡು ವ್ಯಕ್ತಿಚಿತ್ರಗಳು**

ಚಿಕ್ಕಮಗಳೂರು ಜಿಲ್ಲೆಯಲ್ಲಿ 'ವ್ಯಕ್ತಿಚಿತ್ರ'ದಂತಹ ಅಂಕಣ ಸಾಹಿತ್ಯ ಜನಪ್ರಿಯವಾಗಲು ಇಲ್ಲಿನ ಪತ್ರಿಕೆಗಳ ಪ್ರೋತ್ಸಾಹ ಕಾರಣ. ಜಿಲ್ಲಾ ಕೇಂದ್ರದಿಂದ ಪ್ರಕಟವಾಗುವ ಜನಮಿತ್ರ, ಹೊಸದಿಗಂತ, ಮಲೆನಾಡ ಸಂಗತಿ, ಶಿರೋರತ್ನ, ಗಿರಿವಾರ್ತೆ, ಮೊದಲಾದ ಪತ್ರಿಕೆಗಳ ಸಂಪಾದಕರು ತಮ್ಮ ಪತ್ರಿಕೆಗಳಲ್ಲಿ ಹೊಸ ಹೊಸ ಅಂಕಣಗಳಿಗೆ ಜಾಗ ಮಾಡಿಕೊಟ್ಟ ಫಲವಾಗಿ ಅಂಕಣ ಸಾಹಿತ್ಯ ಹುಲುಸಾಗಿ ಬೆಳೆಯಿತು. ಪತ್ರಿಕೆಗಳ ಪ್ರೇರಣೆ ಮತ್ತು ಓದುಗರಿಂದ ಉತ್ತಮ

ಪ್ರತಿಕ್ರಿಯೆ ಕಂಡುಬಂದುದರಿಂದ ಅನೇಕ ಲೇಖಕಕರು ಇಂತಹ ಒಂದು ಸಾಹಿತ್ಯ ರಚನೆಗೆ ಕೈ ಹಾಕಿದರು. ಅವರುಗಳಲ್ಲಿ ವ್ಯಕ್ತಿಚಿತ್ರ ನಿಪುಣರೆಂದೇ ಖ್ಯಾತರಾದ ಪ್ರೊ. ಚಂದ್ರಯ್ಯನಾಯ್ಡು ಪ್ರಮುಖ ಹೆಸರು. ಅಂಕಣ ಸಾಹಿತ್ಯದ ಸರಕನ್ನು ನಿರಂತರವಾಗಿ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಒದಗಿಸುತ್ತಾ ಬಂದಿರುವ ಇವರು ಸುಮಾರು ಎರಡು ನೂರು ವ್ಯಕ್ತಿ ಚಿತ್ರಗಳನ್ನು ರಚಿಸಿರುತ್ತಾರೆ. ನಾಯ್ಡು ಅವರ ಅಂಕಣ ಬರಹಗಳ ಸಾಹಿತ್ಯಕ ಗುಣ ಓದುಗರನ್ನು ಆಕರ್ಷಿಸಿದೆ. ಈ ಬರಹಗಳು ಹತ್ತರ ಜೊತೆಗೆ ಹನ್ನೊಂದು ಎಂಬಂಥ ಸಾಂಪ್ರದಾಯಿಕ ರಚನೆಯಾಗದೆ ಓದುಗರಿಗೆ ಒಂದು ಬಗೆಯ ಜನತಾ ಶಿಕ್ಷಣವನ್ನು ನೀಡುತ್ತಾ ಬಂದಿವೆ. ಓದುಗರಿಂದ ಬಂದಿರುವ ನೂರಾರು ಪ್ರತಿಕ್ರಿಯೆಗಳು ಇದಕ್ಕೆ ನಿದರ್ಶನವಾಗಿವೆ.

ನಾಯ್ಡು ಅವರ ಅಂಕಣ ಸಾಹಿತ್ಯದ ಬಹುತೇಕ ಬರಹಗಳು ವ್ಯಕ್ತಿ ಚಿತ್ರಗಳಿಗೆ ಮೀಸಲಾಗಿವೆ. ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಧಾನ ನೆಲೆಯನ್ನಾಗಿ ಮಾಡಿಕೊಂಡಿರುವ ಈ ಬರವಣಿಗೆಯಲ್ಲಿ ಕಾಣುವುದು ಸಾರ್ವಜನಿಕ ವ್ಯಕ್ತಿತ್ವವನ್ನ. ಬೇರೆಯವರ ಬಗ್ಗೆ ಬರೆಯುವಾಗ ಅವರ ಜೊತೆಗಿನ ತಮ್ಮ ಸಂಬಂಧವನ್ನು ಹೇಳುವ ಅವಕಾಶದಲ್ಲಿ ನಿರೂಪಿತವಾಗುವುದು ಸಾಹಿತ್ಯಿಕ, ಸಾಂಸ್ಕೃತಿಕ ಘಟನೆಗಳು. ಅಂದರೆ ಅವರ ಬರವಣಿಗೆಯಲ್ಲಿ ಶೋಧಿತವಾಗುವುದು ವ್ಯಕ್ತಿಯ ಮೂರ್ತ ಅನುಭವವಲ್ಲ. ಬದಲಾಗಿ ಒಟ್ಟು ಸಮುದಾಯದ ಅನುಭವದ ಭೌದ್ಧಿಕ ರೂಪಗಳನ್ನು ವಿಶ್ಲೇಷಣೆ ಮಾಡುವುದರಲ್ಲಿ ಅವರ ಗಂಭೀರ ಆಸಕ್ತಿಯಿರುವುದನ್ನು ಕಾಣಬಹುದು. ಈ ಗುಣದಿಂದಾಗಿಯೇ ಈ ವ್ಯಕ್ತಿ ಚಿತ್ರಗಳು ತಾತ್ಕಾಲಿಕ ಸಂಗತಿಗಳನ್ನು ಮೀರಿ ನಿಲ್ಲುವ ಶಕ್ತಿ ಪಡೆದಿವೆ. ವಿಷಯ ವೈವಿಧ್ಯತೆ, ಬದುಕಿನ ಬಗೆಗಿನ ಸಮಗ್ರ ನೋಟ, ಭಾವನಾತ್ಮಕ ಮತ್ತು ಕ್ರಿಯಾಶೀಲ ಭಾಷೆ ಇವೆಲ್ಲ ಬರಹಕ್ಕೆ ಹೊಸತನವನ್ನು ತಂದುಕೊಟ್ಟಿವೆ.

ನಾಯ್ಡು ಅವರ ವ್ಯಕ್ತಿ ಚಿತ್ರಗಳಿಗೆ ಯಾವುದೇ ಸೀಮಾ ರೇಖೆಗಳಿಲ್ಲದಿದ್ದರೂ ಇವರ ಬಹುತೇಕ ವ್ಯಕ್ತಿ ಚಿತ್ರಗಳು ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದವಾಗಿವೆ. ಅಲ್ಲಲ್ಲಿ ಅಪರೂಪಕ್ಕೆ ಜಿಲ್ಲೆಯ ಗಡಿಯನ್ನು, ರಾಜ್ಯದ ಗಡಿಯನ್ನು ದಾಟುವ ಪ್ರಯತ್ನ ಮಾಡಿದ್ದಾರೆ. ಕಾಲ, ದೇಶ, ಭಾಷೆಗಳ ಗಡಿಗಳಾಗಲೀ, ಲಿಂಗ, ವಯಸ್ಸು, ವರ್ಣ, ವರ್ಗಭೇದವಾಗಲೀ, ವಿಷಯಗಳ ಪರಿಮಿತಿಯಾಗಲೀ, ದಾಕ್ಷಿಣ್ಯವಾಗಲೀ, ಸನ್ನಿವೇಶಗಳ ಭಯ, ಪೂರ್ವಾಗ್ರಹವಾಗಲೀ ಎಂದೂ ಇವರ ಬರಹವನ್ನು ನಿರ್ಬಂಧಿಸಿಲ್ಲ. ನಾಯ್ಡು ಅವರ ಬರವಣಿಗೆ ಧೋರಣೆ ಸ್ಪಷ್ಟವಾದುದು. ಅವರೇ ಸಂಶೋಧಕರ ಜೊತೆಗಿನ ನೇರ ಸಂದರ್ಶನದಲ್ಲಿ ಹೇಳಿರುವಂತೆ "ಮನುಷ್ಯರಲ್ಲಿ ಸಂಪೂರ್ಣ ಒಳ್ಳೆಯವರೆಂಬುದಿಲ್ಲ. ಸಂಪೂರ್ಣ ಕೆಟ್ಟವರು ಎಂಬುದೂ ಇಲ್ಲ. ಒಮ್ಮೊಮ್ಮೆ ಸಂದರ್ಭಗಳಿಂದಾಗಿ ಒಳ್ಳೆಯದೂ ಕೆಟ್ಟದೂ ಸಂಭವಿಸುತ್ತದೆ. ನಾವು ಎಷ್ಟು ಒಳ್ಳೆಯವರು, ಎಷ್ಟು ಕೆಟ್ಟವರು ಎಂಬುದು ನಮಗೆ ತಿಳಿಯುವುದಿಲ್ಲ. ಅದು ಬೇರೆಯವರ ಅನುಭವಕ್ಕೆ ಬರುವಂತಹದ್ದು. ಆದರೆ ಮನಷ್ಯನ ಒಳ್ಳೆಯತನವನ್ನು ಗುರುತಿಸುವ, ಗ್ರಹಿಸುವ ಕಡೆ ನಾವು ಗಮನಕೊಡಬೇಕು. ಸಜ್ಜನರ ಸಂಗ ನನಗೆ ಇದನ್ನು ಮತ್ತೆ ಮತ್ತೆ ತೋರಿಸಿಕೊಟ್ಟಿದೆ "[10] ಎನ್ನುವ ಮಾತು ಹಲವು ಇತಿಮಿತಿಗಳ ನಡುವೆಯೂ, ಅಪವಾದಗಳ ನಡುವೆಯೂ ಒಳ್ಳೆಯದನ್ನು ಹುಡುಕುವ ಒತ್ತಾಸೆ ಅವರ ವ್ಯಕ್ತಿ ಚಿತ್ರಗಳಲ್ಲಿ ಎದ್ದು ಕಾಣುತ್ತದೆ.

ವ್ಯಕ್ತಿಚಿತ್ರ ರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ನೆಲೆಯನ್ನು ಕಂಡುಕೊಂಡಿದ್ದ ನಾಯ್ಡು ಅವರು ಪತ್ರಿಕೆಗಳಲ್ಲಿ ಪ್ರಕಟವಾದ ಬಿಡಿಬಿಡಿ ಲೇಖನಗಳನ್ನು ಇಡಿಯಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. "ಪತ್ರಿಕಾ ಬರಹಗಳನ್ನು ಓದುಗರು ಗಂಭೀರವಾಗಿ ಪರಿಗಣಿಸದೆ ಓದಿ ಬಿಸಾಕಿ ಬಿಡಬಹುದು. ಆದರೆ ಅದೇ ಲೇಖನಗಳು ಕೃತಿ ರೂಪದಲ್ಲಿದ್ದರೆ ಸಾಹಿತ್ಯ ವಲಯದಲ್ಲಿ ಹೆಚ್ಚುದಿನ ಉಳಿಯುತ್ತವೆ. "[11] ಆ ನಿಟ್ಟಿನಲ್ಲಿ ನಾಯ್ಡು ಅವರು ತಮ್ಮ ಎಲ್ಲಾ ಪತ್ರಿಕಾ ಬರಹಗಳನ್ನು ಸಂಕಲನಗೊಳಿಸಿ ಪ್ರಕಟಿಸಿದ್ದಾರೆ. ಅವರ ಸಹ್ಯಾದ್ರಿ ಸಾಲು (1988) ಸಾಲು ಸೊಡರು (1990) ಸಾಲು ದೀಪಗಳು (1992) ಕನ್ನಡದ ಕಲಶಗಳು (1992) ದೀಪಸ್ತಂಭಗಳು (1994) ಪ್ರಾತಃ ಸ್ಮರಣೀಯರು (2003) ಸಾಲು ಮರಗಳು (ಅಪ್ರಕಟಿತ) ಕೃತಿಗಳು ಓದುಗರ ಗಮನ ಸೆಳೆಯುತ್ತವೆ.

ಇಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳು ಬಹುಮುಖ ಪ್ರತಿಭೆ ಹೊಂದಿದವರು. ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರು. ಸಮಾಜದ ನಾನಾ ರಂಗಗಳಲ್ಲಿ ಕ್ರಿಯಾಶೀಲರಾಗಿ ದುಡಿದು ತಮ್ಮ ಗಣನೀಯ ಸಾಧನೆಯಿಂದ ಕೀರ್ತಿ ಸಂಪಾದಿಸಿದವರು. ಹಾಗೆಯೇ ಎಲೆ ಮರೆಯ ಕಾಯಿಯಂತೆ ಸಮಾಜಕ್ಕೆ ದುಡಿದವರೂ ಇಲ್ಲಿದ್ದಾರೆ. ಈ ಜಿಲ್ಲೆಯಲ್ಲಿಯೇ ಹುಟ್ಟಿ ಬೆಳೆದವರು, ಬೇರೆಡೆಯಿಂದ ಬಂದು ಚಿಕ್ಕಮಗಳೂರನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡವರೂ ಇಲ್ಲಿದ್ದಾರೆ. ನಾಯ್ಡು ಅವರು ತಮ್ಮ ಸಾಹಿತ್ಯ ಕೃಷಿಗೆ ಆರಿಸಿಕೊಳ್ಳುತ್ತಿದ್ದ ವ್ಯಕ್ತಿಗಳು ಪ್ರಸಿದ್ದರೇ ಇರಬೇಕೆಂದೇನಿಲ್ಲ. ಅಪ್ರಸಿದ್ದರ ಬಗ್ಗೆಯೂ ಅದೇ ಶ್ರದ್ದೆಯನ್ನಿಟ್ಟುಕೊಂಡು ಬರೆಯುತ್ತಿದ್ದರೆಂಬುದು ಗಮನಾರ್ಹವಾದುದು. ಹಳೆ ತಲೆಮಾರಿನವರ ಬಗ್ಗೆ, ಸಮಕಾಲೀನರ ಬಗ್ಗೆ, ಹೊಸ ತಲೆಮಾರಿನವರ ಬಗ್ಗೆ ಅವರಿಗೆ ಇದ್ದ ಸಮಾನ ಪ್ರೀತಿ ಗೌರವವನ್ನು ಬರವಣಿಗೆಯಲ್ಲಿ ಕಾಣಬಹುದು.

ಇಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳ ಆದರ್ಶದ ಹಾದಿ, ಬದುಕಿನ ರೀತಿ, ಮಾಡಿದ ಸಾಧನೆ, ಮುಂದಿನ ಪೀಳಿಗೆಗೆ ಸಾಂಸ್ಕೃತಿಕ ಚರಿತ್ರೆಯಾಗಿ ಉಳಿಯಲಿವೆ. "ಇವರ ಪೈಕಿ ದಕ್ಷ ಅಧಿಕಾರಿಗಳಿದ್ದಾರೆ. ಸಾಹಿತಿಗಳೂ, ವಿದ್ವಾಂಸರೂ, ಮೇಧಾವಿಗಳೂ, ಸಜ್ಜನರೂ ಜನಸೇವಾ ನಿರತರೂ ಇದ್ದಾರೆ. ಪತ್ರಿಕೋದ್ಯಮದಲ್ಲಿ ಸಿದ್ಧಹಸ್ತರಾದವರಿದ್ದಾರೆ. ವೈದ್ಯ ವಿಶಾರದರನ್ನೂ, ದಾನ ಶೀಲರನ್ನೂ, ಸಾಹಸ ಜೀವಿಗಳನ್ನೂ, ರಾಜಕಾರಣಿಗಳನ್ನೂ, ಕಲಾಭಿಮಾನಿಗಳನ್ನೂ, ರಸಿಕ ಶಿಖಾಮಣಿಗಳನ್ನೂ, ಶಿಕ್ಷಣ ವೇತ್ತರನ್ನೂ, ಶಿಕ್ಷಣ ಸಂಸ್ಥೆಗಳ ನಿರ್ಮಾಪಕರನ್ನೂ, ಸ್ವತಃ ಸಂಸ್ಥೆಗಳಂತಿರುವರನ್ನೂ ಇಲ್ಲಿ ಕಾಣಬಹುದು. "[12] ನಿತ್ಯ ಪರಿಚಿತ ಕ್ಷೇತ್ರವೆನಿಸಿದ ಸಾಹಿತ್ಯಕ್ಕಿಂತ ಹೊರಗಿನ ಕ್ಷೇತ್ರಗಳಿಂದ ಆಯ್ಕೆಗೊಂಡ ಮಹನೀಯರೂ, ಮಹಿಳೆಯರೂ, ನಾಯ್ಡು ಅವರ ಅಂಕಣಗಳಲ್ಲಿ ಸ್ಪಷ್ಟವಾಗಿ ಮೂಡಿಬರುತ್ತಾರೆ. ಇವು ಮೇಲುನೋಟಕ್ಕೆ ವ್ಯಕ್ತಿನಿಷ್ಠ ಬರಹಗಳಂತೆ ಕಂಡು ಬಂದರೂ ಅವು ಕೇವಲ ವ್ಯಕ್ತಿನಿಷ್ಠ ಬರಹಗಳಾಗದೆ ಅವು ಸಂಸ್ಕೃತಿ ನಿಷ್ಠವಾಗಿವೆ. ಅಂಕಣ ಬರಹಕ್ಕೆ ನಾಯ್ಡು ಅವರಿಗೆ ವ್ಯಕ್ತಿ, ವಿಷಯ, ಸಂದರ್ಭಗಳು ಕೇವಲ ನೆಪಗಳಲ್ಲ. ನಿಜವಾದ ಕಾರಣಗಳು. ಶಬ್ಧ ಚಮತ್ಕಾರದಲ್ಲಿ ಮೈಮರೆಯದೆ ಸಮಗ್ರ ಮಾಹಿತಿಗಳಿಂದ ಲೇಖನಗಳನ್ನು ಮೈದುಂಬಿಸುತ್ತಾರೆ.

ಸಾಮಾನ್ಯವಾಗಿ ಅಂಕಣ ಬರಹಗಳನ್ನು ಪತ್ರಿಕಾ ಸಾಹಿತ್ಯವೆಂದೂ, ಪತ್ರಿಕಾ ಸಾಹಿತ್ಯವನ್ನು ಅವಸರದ ಸೃಷ್ಟಿಯೆಂದೂ ಕೆಲವರು ಜರಿಯುತ್ತಾರೆ. ಅದು ಸಾಹಿತ್ಯ ಅಲ್ಲವೆಂದು ಅಭಿಪ್ರಾಯಪಟ್ಟವರೂ ಉಂಟು. ಅಂಕಣ ಬರಹಗಳು ದಿನಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾಗುವುದು ನಿಜ. ಅಂದ ಮಾತ್ರಕ್ಕೆ ಅವು ಮೌಲಿಕವಲ್ಲ ಎನ್ನುವುದು ಮಾತ್ರ ಸರಿಯಲ್ಲ. ಅದು ಮೌಲಿಕವೇ? ಅಲ್ಲವೇ? ಎನ್ನುವುದು ಅಂಕಣಕಾರನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ನಾಯ್ಡು ಅವರ ವ್ಯಕ್ತಿಚಿತ್ರಗಳು ಮತ್ತು ಪುಸ್ತಕ ಪರಿಚಯದ ಲೇಖನಗಳು ಪತ್ರಿಕಾ ವ್ಯವಸಾಯಕ್ಕೆ ಪೂರಕವಾಗಿ ಬಂದಂಥವು.

ಇದು ಲೇಖನಗಳ ಮಿತಿಯನ್ನು ಸೂಚಿಸುತ್ತದೆ. ಈ ಬಗೆಯ ಲೇಖನಗಳಿಗೆ ವಿಶಿಷ್ಟವಾದ ಉದ್ದೇಶವಿರುತ್ತದಾದರೂ ಲೇಖಕರಲ್ಲಿ ಆಯಾ ಸಂದರ್ಭಕ್ಕೆ ಕ್ಷಿಪ್ರಗತಿಯಲ್ಲಿ ಲೇಖನವನ್ನು ಸಿದ್ದಗೊಳಿಸುವ ಚಾತುರ್ಯವಿರಬೇಕಾಗುತ್ತದೆ. ಜೊತೆಗೆ ಸಾಹಿತ್ಯದಲ್ಲಿ ಜೊಳ್ಳು ಯಾವುದು? ಗಟ್ಟಿಯಾವುದು? ಎಂಬ ಮೌಲ್ಯ ಪ್ರಜ್ಞೆ ಅಳಿಸಿ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿಯಿರಬೇಕು. ಇಲ್ಲವಾದರೆ ಅಭಿಪ್ರಾಯಗಳು ಮುಖಸ್ತುತಿಯ ಬಿನ್ನವತ್ತಳೆಗಳಾಗಿ ಬಿಡಬಹುದು. ಪತ್ರಿಕಾ ಅಂಕಣಕಾರನಿಗೆ ಇರಬೇಕಾದ ಚತುರತೆ, ಸ್ಮೃತಿ, ಸೂಕ್ಷ್ಮತೆ ಮತ್ತು ಪರಿಶ್ರಮಗಳು ನಾಯ್ಡು ಅವರಲ್ಲಿ ವಿಫುಲವಾಗಿ ಕಂಡುಬರುತ್ತವೆ. ಆದರೆ ಎಲ್ಲಿಯೂ ದೋಷಗಳನ್ನು ಗುರುತಿಸುವ, ತಪ್ಪುಗಳನ್ನು, ತಿದ್ದುವ, ಟೀಕೆ ವಿಡಂಬನೆಗಳಿಗೆ ಇವರು ಕೈ ಹಾಕುವುದಿಲ್ಲ. ತುಂಬ ಎಚ್ಚರಿಕೆಯಿಂದ ಎಲ್ಲರನ್ನೂ ಓಲೈಸುವ ಪ್ರಯತ್ನವನ್ನು ಮಾಡಿರುವುದು ನಾಯ್ಡು ಅವರ ಬರಹದ ಮಿತಿಯೂ ಹೌದು.

**ಅಡಿ ಟಿಪ್ಪಣಿಗಳು**

1. ಡಾ. ಎ. ಸುಬ್ಬಣ್ಣ ರೈ, ಅಂಕಣ ಸಾಹಿತ್ಯ–ದಶಕದ ಕನ್ನಡ ಸಾಹಿತ್ಯ (ಸಂ). ಡಾ. ಎಫ್.ಟಿ ಹಳ್ಳಿಕೇರಿ, ಪು.ಸಂ–96 (2002)
2. ಡಾ. ಎಚ್.ಎಸ್. ರಾಘವೇಂದ್ರ ರಾವ್, 'ಮಾನಾ' ಹಾಮಾನಾ ಅಭಿನಂದನಾ ಗ್ರಂಥ, (ಸಂ) ಡಾ.ಎಸ್.ಎಲ್.ಭೈರಪ್ಪ,ಪು.ಸಂ–67 (1992)
3. ಹಾಮಾನಾ(ಡಾ) ಪ್ರ ಸಂ ಕನ್ನಡ ವಿಶ್ವಕೋಶ ಸಂಪುಟ–3, ಪು ಸಂ–250
4. ಹಾಮಾನಾ(ಡಾ) ಪ್ರ ಸಂ ಕನ್ನಡ ವಿಶ್ವಕೋಶ ಸಂಪುಟ–3, ಪು ಸಂ–251
5. ಡಾ. ಎ. ಸುಬ್ಬಣ್ಣ ರೈ, ಅಂಕಣ ಸಾಹಿತ್ಯ–ದಶಕದ ಕನ್ನಡ ಸಾಹಿತ್ಯ (ಸಂ). ಡಾ. ಎಫ್.ಟಿ ಹಳ್ಳಿಕೇರಿ, ಪು.ಸಂ–97 (2002)
6. ಶೇಷಗಿರಿ ರಾವ್ ಎಲ್. ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಪು ಸಂ–233 (1999)
7. ಡಾ. ಎಸ್. ಪಿ. ಪದ್ಮಪ್ರಸಾದ್, ಡಾ. ಕಮಲಾ ಹಂಪನಾ ಒಂದು ಅಧ್ಯಯನ, ಪು.ಸಂ–51 (1995)
8. ಕೆ. ಓಂಕಾರಪ್ಪ, ಮುನ್ನುಡಿ–ಪ್ರಾತಃ ಸ್ಮರಣೀಯರು–ಚಂದ್ರಯ್ಯನಾಯ್ಡು, ಪು.ಸಂ–ಖ (2003)
9. ಡಾ. ಜಿ. ಎಸ್. ಅಮೂರ, 'ಮಾನಾ' ಹಾಮಾನಾ ಅಭಿನಂದನಾ ಗ್ರಂಥ (ಸಂ)ಡಾ.ಎಸ್.ಎಲ್.ಭೈರಪ್ಪ, ಪು.ಸಂ–54 (1992)
10. ಚಂದ್ರಯ್ಯನಾಯ್ಡು ನೇರ ಸಂದರ್ಶನ, ದಿನಾಂಕ:15–09–2009
11. ಪ್ರೊ. ಎಚ್. ಜಿ. ಸಣ್ಣಗುಡ್ಡಯ್ಯ, ಚಂದ್ರಯ್ಯನಾಯ್ಡು ಕೃತಿಗಳು (ಸಂ) ವಾಣಿನಾಯ್ಡು, ಪು.ಸಂ–106 (2006)
12. ಎಚ್ಚೆಸ್ಕೆ, ಮುನ್ನುಡಿ–ಸಹ್ಯಾದ್ರಿಸಾಲು–ಚಂದ್ರಯ್ಯನಾಯ್ಡು, ಪು.ಸಂ – ಗಿಖ (1988)